# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಮಾನ್ಯ ಸದಸ್ಯರ ಹೆಸರು:** | **ಶ್ರೀ ಮಾನೆ ಶ್ರೀನಿವಾಸ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರು),** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** | **1060 (1200)** |
| **ಉತ್ತರಿಸಬೇಕಾದ ದಿನಾಂಕ:** | **30.09.2020** |
| **ಉತ್ತರಿಸುವ ಸಚಿವರು:** | **ವಸತಿ ಸಚಿವರು** |

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಹಾವೇರಿ, ಧಾರವಾಡ ಹಾಗೂ ಗದಗ ಜಿಲ್ಲೆಗಳಲ್ಲಿ ಖಾಸಗಿ ಮಾಲೀಕತ್ವದ ಜಾಗಗಳಲ್ಲಿರುವ ಕೊಳಗೇರಿ ಪ್ರದೇಶಗಳ ಸಂಖ್ಯೆ ಎಷ್ಟು;</td><td rowspan="2">ಹಾವೇರಿ, ಧಾರವಾಡ ಹಾಗೂ ಗದಗ ಜಿಲ್ಲೆಗಳಲ್ಲಿ ಖಾಸಗಿ ಮಾಲೀಕತ್ವದ ಜಾಗಗಳಲ್ಲಿರುವ ಕೊಳಗೇರಿ ಪ್ರದೇಶಗಳ ಸಂಖ್ಯೆ ಹಾಗೂ ಕೊಳಗೇರಿಗಳಲ್ಲಿ ವಾಸಿಸುವ ಕುಟುಂಬಗಳ ವಿವರ/ಜನಸಂಖ್ಯೆ ಕೆಳಕಂಡಂತಿದೆ .
<table>
<tr><th>ಕ್ರ.ಸ</th><th>ಜಿಲ್ಲೆ</th><th>ಖಾಸಗಿ ಕೊಳಗೇರಿಗಳ ಸಂಖ್ಯೆ</th><th>ಕುಟುಂಬಗಳ ಸಂಖ್ಯೆ</th><th>ಜನಸಂಖ್ಯೆ</th></tr>
<tr><td>1</td><td>ಹಾವೇರಿ</td><td>27</td><td>3,664</td><td>18,184</td></tr>
<tr><td>2</td><td>ಧಾರವಾಡ</td><td>69</td><td>14,867</td><td>82,181</td></tr>
<tr><td>3</td><td>ಗದಗ</td><td>37</td><td>5,752</td><td>29,572</td></tr>
<tr><td></td><td>ಒಟ್ಟು</td><td>133</td><td>24,283</td><td>1,29,937</td></tr>
</table></td></tr>
<tr><td>(ಆ)</td><td>ಹಾವೇರಿ, ಧಾರವಾಡ ಹಾಗೂ ಗದಗ ಜಿಲ್ಲೆಗಳಲ್ಲಿ, ಖಾಸಗಿ ಮಾಲೀಕತ್ವದ ಜಾಗಗಳಲ್ಲಿ ವಾಸಿಸುತ್ತಿರುವ ಒಟ್ಟು ಕೊಳಚೆ ಪ್ರದೇಶಗಳ ನಿವಾಸಿ ಕುಟುಂಬಗಳು ಹಾಗೂ ಜನ ಸಂಖ್ಯೆ ಎಷ್ಟು;</td></tr>
<tr><td>(ಇ)</td><td>ಹಾವೇರಿ, ಧಾರವಾಡ ಹಾಗೂ ಗದಗ ಜಿಲ್ಲೆಗಳಲ್ಲಿ ಖಾಸಗಿ ಮಾಲೀಕತ್ವದ ಜಾಗಗಳನ್ನು ಕೊಳಗೇರಿ ಪ್ರದೇಶ ಅಭಿವೃದ್ಧಿ ಮಂಡಳಿಯ ವಶಕ್ಕೆ ಪಡೆದುಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;</td><td>ಖಾಸಗಿ ಮಾಲೀಕತ್ವದಲ್ಲಿ ಇರುವ ಕೊಳಗೇರಿಗಳನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನಾ) ಕಾಯ್ದೆ 1973 ರ ಕಲಂ-17 ರನ್ವಯ ಭೂಸ್ವಾದೀನಪಡಿಸಿಕೊಳ್ಳಲು ಅವಕಾಶವಿರುತ್ತದೆ. ಖಾಸಗಿ ಮಾಲೀಕತ್ವದಲ್ಲಿರುವ ಕೊಳಗೇರಿಗಳನ್ನು ಸದ್ಯಕ್ಕೆ ಸರ್ಕಾರದ ವಶಕ್ಕೆ ಪಡೆಯುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.</td></tr>
</table>

| | | |
|---|---|---|
| (ಈ) | ಹಾವೇರಿ, ಧಾರವಾಡ ಹಾಗೂ ಗದಗ ಜಿಲ್ಲೆಗಳಲ್ಲಿ ಖಾಸಗಿ ಮಾಲೀಕತ್ವದ ಜಾಗಗಳನ್ನು ಕೊಳಗೇರಿ ಪ್ರದೇಶ ಅಭಿವೃದ್ಧಿ ಮಂಡಳಿಯ ವಶಕ್ಕೆ ಪಡೆದುಕೊಂಡು, ಸದರಿ ಜಾಗದಲ್ಲಿ ವಾಸವಿರುವ ನಿವಾಸಿಗಳಿಗೆ ಕ್ರಯಪತ್ರ/ ಹಕ್ಕುಪತ್ರ ನೀಡಲು ಸರ್ಕಾರ ಮುಂದಾಗಬಹುದೇ: ಇದಕ್ಕೆ ಬೇಕಾಗುವ ಕಾಲಾವಕಾಶವೆಷ್ಟು? | ಹಾವೇರಿ, ಧಾರವಾಡ ಹಾಗೂ ಗದಗ ಜಿಲ್ಲೆಗಳಲ್ಲಿ ಖಾಸಗಿ ಮಾಲೀಕತ್ವದಲ್ಲಿ ಕೊಳಚೆ ಪ್ರದೇಶಗಳನ್ನು ವಶಕ್ಕೆ ಪಡೆದು, ಸದರಿ ಜಾಗದಲ್ಲಿ ಇರುವ ನಿವಾಸಿಗಳಿಗೆ ಕ್ರಯಪತ್ರ/ ಹಕ್ಕುಪತ್ರಗಳನ್ನು ನೀಡುವ ಪ್ರಸ್ತಾವನೆ ಇರುವುದಿಲ್ಲ. |

**ವಇ 107 ಕೊಮಂಇ 2020**

**(ವಿ.ಸೋಮಣ್ಣ)**
**ವಸತಿ ಸಚಿವರು**